# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ತೋಕ್ಯಾನಾಯ್ಕ, ಹಿಂದಿನ ಕಿರಿಯ ಇಂಜಿನಿಯರ್, ಪಂ.ರಾ.ಇಂ.ಉಪ ವಿಭಾಗ, ಹಿರಿಯೂರು ಹಾಗೂ ಶ್ರೀ ಸತ್ಯಪ್ಪ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಉಪ ವಿಭಾಗ, ಹಿರಿಯೂರು ಇವರುಗಳ ವಿರುದ್ಧದ ಲೋಕಾಯುಕ್ತ ವಿಚಾರಣೆ – ದಂಡನೆ ವಿಧಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ:-
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 35 ಇಎನ್‌ಕ್ಯೂ 2016 ದಿನಾಂಕ:07.05.2016.
2. ಅಪರ ನಿಬಂಧಕರು, ವಿಚಾರಣೆಗಳು-14, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇವರ ಇಲಾಖಾ ವಿಚಾರಣೆ ವರದಿ ಸಂಖ್ಯೆ:UPLOK-2/DE/167/2016/ARE-14, ದಿನಾಂಕ: 02.09.2021
3. ಮಾನ್ಯ ಉಪ ಲೋಕಾಯುಕ್ತ ರವರ ಶಿಫಾರಸ್ಸು ವರದಿ ಸಂಖ್ಯೆ: UPLOK-2/DE-167/2016/ARE-14, ದಿನಾಂಕ: 07.09.2021
4. ಸರ್ಕಾರದ 2ನೇ ಕಾರಣ ಕೇಳು ನೋಟೀಸ್ ಸಂಖ್ಯೆ: ಗ್ರಾಅಪ 96 ಇಎನ್‌ಕ್ಯೂ 2021, ದಿನಾಂಕ:25.10.2021
5. ಶ್ರೀ ತೋಕ್ಯಾನಾಯ್ಕ, ಹಿಂದಿನ ಕಿರಿಯ ಇಂಜಿನಿಯರ್, ಮತ್ತು ಶ್ರೀ ಸತ್ಯಪ್ಪ, ಹಿಂದಿನ ಸಹಾಯಕ ಕಾಯಪಾಲಕ ಇಂಜಿನಿಯರ್ ರವರುಗಳ ಲಿಖಿತ ವಿವರಣೆ ದಿನಾಂಕ: 14-11-2021 & 16-11-2021.

*****

**ಪ್ರಸ್ತಾವನೆ:**

ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕಿನ ಎಂ.ಡಿ.ಕೋಟೆ ಗ್ರಾಮ ಪಂಚಾಯತಿ ವ್ಯಾಪ್ತಿಯ ವದ್ದಿಗೆರೆ ಗ್ರಾಮದ ಸರ್ವೆ ನಂ.53ರಲ್ಲಿ ಬರುವ ತಮ್ಮ 22.37 ಎಕರೆ ಜಮೀನಿನಲ್ಲಿ ಮಂಜೂರಾದ ಚೆಕ್ ಬಂಡ್ ಕಾಮಗಾರಿಯನ್ನು ಕ್ರಿಯಾ ಯೋಜನೆಯಂತೆ ಪೂಣಗೊಳಿಸದೆ ಪೂರ್ತಿ ಹಣವನ್ನು ಬಿಡುಗಡೆಗೊಳಿಸಿರುತ್ತಾರೆಂದು ಶ್ರೀಮತಿ ಗಂಗಮ್ಮ ಕೋಂ ಶ್ರೀ ಬಿ.ಆರ್ ಕರಿಯಣ್ಣ ಇವರು ಕರ್ನಾಟಕ ಲೋಕಾಯುಕ್ತ ಕಛೇರಿಗೆ ನೀಡಿರುವ ದೂರಿನ ಮೇರೆಗೆ ಮಾನ್ಯ ಉಪ ಲೋಕಾಯುಕ್ತರವರು ಪರಿಶೀಲನೆ ನಡೆಸಿ ಲೋಕಾಯುಕ್ತ ಕಾಯ್ದೆ 7(2)ರಡಿ ಪ್ರಕರಣವನ್ನು ದಾಖಲಿಸಿಕೊಂಡು ಲೋಕಾಯುಕ್ತ ಕಛೇರಿಯಿಂದ ತನಿಖೆ ನಡೆಸಿ, ಲೋಕಾಯುಕ್ತ ಕಾಯ್ದೆ ಕಲಂ 12(3)ರ ಅನುಸಾರ ಸಲ್ಲಿಸಿದ ವರದಿಯನ್ನು ಸರ್ಕಾರವು ಪರಿಶೀಲಿಸಿ, ಸದರಿ ಕಾಮಗಾರಿಯ ವಾಸ್ತವಿಕ ಅಳತೆಗಿಂತ ಹೆಚ್ಚಿನ ಅಳತೆಯನ್ನು ದಾಖಲಿಸಿ ಹಣ ದುರುಪಯೋಗಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದ ಹಿನ್ನೆಲೆಯಲ್ಲಿ ಇದಕ್ಕೆ ಕಾರಣರಾದ ಈ ಕೆಳಕಂಡ ಆಪಾದಿತ ಅಧಿಕಾರಿ/ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಂತೆ ನಡೆಸಲು ಸದರಿ ನಿಯಮಗಳ ನಿಯಮ 14(ಎ) ರನ್ವಯ ಪ್ರಕರಣವನ್ನು ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 35 ಇಎನ್‌ಕ್ಯೂ 2016 ದಿನಾಂಕ:07.05.2016ರ ಸರ್ಕಾರದ ಆದೇಶದಲ್ಲಿ ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲಾಗಿತ್ತು.

...2/-

1. ಶ್ರೀ ತೋಕ್ಯಾನಾಯ್ಕ, ಹಿಂದಿನ ಕಿರಿಯ ಇಂಜಿನಿಯರ್, ಪಂ.ರಾ.ಇಂ.ಉಪ ವಿಭಾಗ, ಹಿರಿಯೂರು.
2. ಶ್ರೀ ಸತ್ಯಪ್ಪ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಉಪ ವಿಭಾಗ, ಹಿರಿಯೂರು.
3. ಶ್ರೀ ಅಬ್ದುಲ್ ರಜಾಕ್, ಹಿಂದಿನ ಕಾರ್ಯದರ್ಶಿ, ತಾಲ್ಲೂಕು ಪಂಚಾಯತ್, ಮೊಳಕಾಲ್ಮೂರು.

ಸದರಿ ಆದೇಶದ ಅನುಸಾರ ಮಾನ್ಯ ಉಪಲೋಕಾಯುಕ್ತರವರು ಅಪರ ನಿಬಂಧಕರು, ವಿಚಾರಣೆಗಳು-14 ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿರುತ್ತಾರೆ. ಆಪಾದಿತ ನೌಕರರ ಹೇಳಿಕೆ ಮತ್ತು ಹಲವಾರು ದಾಖಲೆಗಳನ್ನು ಪರಿಶೀಲಿಸಿ ವಿವರವಾಗಿ ವಿಚಾರಣೆ ನಡೆಸಿದ್ದು, ಆಪಾದಿತ ನೌಕರರ ವಿರುದ್ಧದ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿವೆಯೆಂದು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 02.09.2021ರ ವಿಚಾರಣಾ ವರದಿಯನ್ನು ಮಾನ್ಯ ಉಪ ಲೋಕಾಯುಕ್ತರವರಿಗೆ ಸಲ್ಲಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರವರು ವಿಚಾರಣಾಧಿಕಾರಿಗಳ ವರದಿಯನ್ನು ಪರಿಶೀಲಿಸಿ, 3 ಜನ ಆಪಾದಿತರ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ಅವರುಗಳಿಗೆ ದಂಡನೆಯನ್ನು ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ: 07.09.2021ರ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಮೂವರೂ ಆಪಾದಿತರುಗಳ ಪೈಕಿ ಕ್ರ.ಸಂ.3ರ ಶ್ರೀ ಅಬ್ದುಲ್ ರಜಾಕ್, ಹಿಂದಿನ ಕಾರ್ಯದರ್ಶಿ, ತಾಲ್ಲೂಕು ಪಂಚಾಯತ್, ಮೊಳಕಾಲ್ಮೂರು(ಹಾಲಿ ನಿವೃತ್ತ) ಇವರ ಸಕ್ಷಮ ಪ್ರಾಧಿಕಾರ ನಿರ್ದೇಶಕರು(ಪಂ.ರಾಜ್), ಗ್ರಾ.ಅ.ಪಂ.ರಾಜ್ ಇಲಾಖೆ ಆಗಿದ್ದು, ಅದರಂತೆ, ಸದರಿಯವರಿಗೆ ಮಾನ್ಯ ಉಪ ಲೋಕಾಯುಕ್ತರವರು ಶಿಫಾರಸ್ಸು ಮಾಡಿರುವ ದಂಡನೆಯನ್ನು ವಿಧಿಸುವ ಸಂಬಂಧ ಮಾನ್ಯ ಉಪ ಲೋಕಾಯುಕ್ತರವರ ಶಿಫಾರಸ್ಸು, ವಿಚಾರಣಾಧಿಕಾರಿಗಳ ವರದಿ ಹಾಗೂ ದಾಖಲೆಗಳ ಪ್ರತಿಗಳನ್ನು ದಿನಾಂಕ:25.10.2021ರ ಅನಧಿಕೃತ ಟಿಪ್ಪಣಿಯ ಜೊತೆ ನಿರ್ದೇಶಕರು (ಪಂ.ರಾಜ್), ಗ್ರಾ.ಅ.ಪಂ.ರಾಜ್ ಇಲಾಖೆಗೆ ಕಳುಹಿಸಿ, ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಲಾಗಿರುತ್ತದೆ.

ಇನ್ನುಳಿದಂತೆ 1. ಶ್ರೀ ತೋಕ್ಯಾನಾಯ್ಕ, ಹಿಂದಿನ ಕಿರಿಯ ಇಂಜಿನಿಯರ್, ಪಂ.ರಾ.ಇಂ.ಉಪ ವಿಭಾಗ, ಹಿರಿಯೂರು ಹಾಗೂ 2. ಶ್ರೀ ಸತ್ಯಪ್ಪ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಉಪ ವಿಭಾಗ, ಹಿರಿಯೂರು ಇವರುಗಳ ವಿರುದ್ಧ ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾಗಿರುವುದರಿಂದ ವಿಚಾರಣಾ ವರದಿಯನ್ನು ಆಧರಿಸಿ ಕ್ರಮ ಕೈಗೊಳ್ಳುವ ಪೂರ್ವದಲ್ಲಿ ಸದರಿಯವರುಗಳಿಗೆ ಮಾನ್ಯ ಉಪ ಲೋಕಾಯುಕ್ತರವರ ಶಿಫಾರಸ್ಸು ಹಾಗೂ ವಿಚಾರಣಾ ವರದಿಯ ಪ್ರತಿಗಳನ್ನು ಮೇಲೆ ಕ್ರಮ ಸಂಖ್ಯೆ(4) ರಲ್ಲಿ ಓದಲಾದ ದಿನಾಂಕ:25.10.2021ರ 2ನೇ ಕಾರಣ ಕೇಳುವ ನೋಟೀಸಿನೊಂದಿಗೆ ಜಾರಿ ಮಾಡಿ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಲು ತಿಳಿಸಲಾಗಿತ್ತು.

ವಿಚಾರಣಾ ವರದಿಗೆ ಪ್ರತಿಯಾಗಿ ಶ್ರೀ ತೋಕ್ಯಾನಾಯ್ಕ, ಹಿಂದಿನ ಕಿರಿಯ ಇಂಜಿನಿಯರ್, ಪಂ.ರಾ.ಇಂ.ಉಪ ವಿಭಾಗ, ಹಿರಿಯೂರು ರವರು ಮೇಲೆ ಓದಲಾದ ಕ್ರಮ ಸಂಖ್ಯೆ (6)ರಲ್ಲಿ ಕರ್ನಾಟಕ ಲೋಕಾಯುಕ್ತ ತಾಂತ್ರಿಕ ಸಿಬ್ಬಂದಿಯಾದ ಶ್ರೀ ಬಿ.ನಂಜಪ್ಪ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಕಾಮಗಾರಿ ಸ್ಥಳವನ್ನು ಎರಡನೇ ಮಾನ್ಸೂನ್ ಅಂತ್ಯದ ಅವಧಿಯಲ್ಲಿ ಕಾಮಗಾರಿಯನ್ನು ಪರಿಶೀಲಿಸಿದ್ದು, ಸರ್ಕಾರದ ನಡವಳಿ "Deduction of shrinkage of settlement in earthwork embarkment ಪ್ರಕಾರ ಏರಿ ಎತ್ತರ ತಗ್ಗುತ್ತದೆ. ಕೊರತೆ ಮತ್ತು ಸಮವಳಿಯಾಗುವುದು ಸಹಜ ಎಂದು ಸರ್ಕಾರ ಪರಿಗಣಿಸಿದೆ. ಇದಲ್ಲದೆ, ಶ್ರೀ ಬಿ.ಎಸ್.ಬಾಲಕೃಷ್ಣ ಬಿನ್ ಶ್ರೀನಿವಾಸ್, ಅಧೀಕ್ಷಕ ಇಂಜಿನಿಯರ್, ಲೋ.ಇ, ಶಿವಮೊಗ್ಗ ಇವರು ಕಾಮಗಾರಿ ಸ್ಥಳವನ್ನು ಪರಿಶೀಲಿಸಿ, ಮಳೆ ಮಾಹಿತಿಯನ್ನು ಹಿರಿಯೂರು ತಾಲ್ಲೂಕು ತಹಶೀಲ್ದಾರ್ ಕಛೇರಿಯಿಂದ ಪಡೆದ ವರದಿ ತಾಲ್ಲೂಕಿನ ಸರಾಸರಿ ಮಳೆ

...3/-

ಮಾಹಿತಿಯಾಗಿರುತ್ತದೆ. ಆದರೆ ಇವರು ಅಧಿಕೃತ ಸ್ಥಳದ ಮಳೆಯ ಮಾಹಿತಿಯನ್ನು ಪಡೆದಿರುವುದಿಲ್ಲ. ಸದರಿಯವರು ಶಿವಮೊಗ್ಗ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅವಧಿಯಲ್ಲಿ ಆ ಸ್ಥಳದಲ್ಲಿ ಮಳೆ ಕಡಿಮೆಯಾಗಿರುವುದು ಸತ್ಯವಾಗಿರುತ್ತದೆ. ಸದರಿ ಕಾಮಗಾರಿ ನಡೆದಿರುವುದು 2006-07ನೇ ಸಾಲಿನದ್ದಾಗಿರುತ್ತದೆ. ಸದರಿ ಅವಧಿಯಲ್ಲಿ 2 ಮಾನ್ಸೂನ್ ಅವದಿ ಸಾಕಷ್ಟು ಮಳೆಯಾಗಿರುವುದು ಸತ್ಯವಾಗಿರುತ್ತದೆ ಎಂಬುದಾಗಿ ಲಿಖಿತ ಹೇಳಿಕೆ ನೀಡಿರುತ್ತಾರೆ. ಮುಂದುವರೆದು, 2006-07ನೇ ಸಾಲಿನಲ್ಲಿ ಕೂಲಿ ಕಾರ್ಮಿಕರಿಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005ರಡಿ ನಿಯಮವನ್ನು ಉಲ್ಲಂಘಿಸದೇ ಕೂಲಿ ಪಾವತಿಸಲು ಆ ಸಮಯಲ್ಲಿ ಆಗಿರುವ ಕಾಮಗಾರಿಯ ಪರಿಣಾಮವನ್ನು ಅಳತೆ ಪಡೆದುಕೊಂಡು ಅಳತೆ ಪುಸ್ತಕದಲ್ಲಿ ದಾಖಲಿಸಲಾಗಿದ್ದು, ಇದು ಮೊದಲನೇ ಭಾಗಶ: ಬಿಲ್ಲು ಆಗಿರುವುದು ಸತ್ಯವಾಗಿರುತ್ತದೆ. ಆದ್ದರಿಂದ ತಮ್ಮನ್ನು ನಿರಾಪರಾಧಿ ಎಂದು ಪರಿಗಣಿಸಿ ಈ ಪ್ರಕರಣದಿಂದ ಕೈಬಿಡುವಂತೆ ಕೋರಿರುತ್ತಾರೆ.

ಮತ್ತೊಬ್ಬ ಆಪಾದಿತರಾದ ಶ್ರೀ ಸತ್ಯಪ್ಪ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನೀಯರ್, ಪಂ.ರಾ.ಇಂ.ಉಪ ವಿಭಾಗ, ಹಿರಿಯೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ವಿವರಣೆಯಲ್ಲಿ, ಸದರಿ ಕಾಮಗಾರಿ ಉದ್ದ 520 ಮೀಟರ್ ಇದ್ದು ಚೆಕ್ ಬಂಡ್ ಎತ್ತರ 1.3 ಮಿ(70 ಮೀ. ಉದ್ದ) 1.200 ಎತ್ತರ(364 ಮೀ ಉದ್ದ) 1.5 ಮೀ ಎತ್ತರ(86 ಮೀ ಉದ್ದ) ಇರುತ್ತದೆ. ಆದರೆ ಲೋಕಾಯುಕ್ತರು 520 ಮೀ ಉದ್ದದ ಬಂಡೆಗೆ 06.ರಿಂದ 0.9 ಮೀ ಎಂದು ತಿಳಿಸಿ ರೂ 33,192 ಹೆಚ್ಚಿಗೆ ಪಾವತಿಸಲಾಗಿದೆ ಎಂದು ತಿಳಿಸಿರುತ್ತಾರೆ. ಈ ಕಾಮಗಾರಿಯನ್ನು 1 ವರ್ಷ 6 ತಿಂಗಳ ನಂತರ (2 ಸೀಸನ್) ಅಳತೆ ಮಾಡಲಾಗಿದೆ. ಇದರಿಂದ ಎತ್ತರದಲ್ಲಿ ಶ್ರಿಂಕೇಜ್ ಆಗಿದೆ ಎಂದು ತಿಳಿಸಿದರೂ ಇದನ್ನು ಪರಿಗಣಿಸಿರುವುದಿಲ್ಲ. ಸರ್ಕಾರದ ಆದೇಶ ಲೋ.ಇ/11/ಜಿ.ಎಸ್.ಎಮ್ 63 ದಿನಾಂಕ:10.03.1966 ರಲ್ಲಿ ಶ್ರಿಂಕೇಜ್ ಬಗ್ಗೆ ವಿವರವಾಗಿ ತಿಳಿಸಲಾಗಿದೆ. ಈ ಕಾಮಗಾರಿಯ ಸ್ಥಳ ಪರಿಶೀಲಿಸಲು ಲೋಕಾಯುಕ್ತರು ಶ್ರೀ ಬಿ.ಎಸ್.ಬಾಲಕೃಷ್ಣ, ಸೂ.ಇಂ.ಲೋ.ಇ ಶಿವಮೊಗ್ಗ ಇವರಿಗೆ ವಹಿಸಿದ್ದು, ಸದರಿಯವರು ದಿ:19.08.2015ರಂದು ಅಂದರೆ 8 ವರ್ಷಗಳ ನಂತರ ಸ್ಥಳ ಪರಿಶೀಲನೆ ಮಾಡಿ ಕಾಮಗಾರಿಯ ಸ್ಥಳದಲ್ಲಿ ಗಿಡ ಘಂಟೆ ಬೆಳೆದು ಅಳತೆ ಮಾಡಲು ಸಾಧ್ಯವಾಗುವುದಿಲ್ಲವೆಂದು ಹಾಗೂ ಈ ಅವಧಿಯಲ್ಲಿ ಮಳೆ ಬಂದಿರುವುದುಲ್ಲವೆಂದು ತಿಳಿಸಿರುತ್ತಾರೆ. ಆದರೆ ಸದರಿ ಅವಧಿಯಲ್ಲಿ ಮಳೆ ಆಗಿರುವುದಕ್ಕೆ ದಾಖಲೆಗಳನ್ನು ಲಗತ್ತಿಸಲಾಗಿದೆ. ಸದರಿ ಪ್ರಕರಣವು 14 ವರ್ಷಗಳಿಂದ ನಡೆಯುತ್ತಿರುವುದರಿಂದ ನಾನು ಬಡ್ತಿಯಿಂದ ವಂಚಿತನಾಗಿದ್ದೇನೆ. ಹಾಗೂ ಈಗಾಗಲೇ ಮಾನಸಿಕವಾಗಿ ಸಹೋದ್ಯೋಗಿಗಳ ಅವಮಾನದಿಂದ ಬಹಳನೊಂದಿದ್ದೇನೆ. ಆದ್ದರಿಂದ ತಿಳುವಳಿಕೆ ಅಥವಾ ಎಚ್ಚರಿಕೆ ಪತ್ರವನ್ನು ನೀಡಿ ಈ ಪ್ರಕರಣದಿಂದ ಮುಕ್ತಾಯಗೊಳಿಸಲು ಕೋರಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ವಿಚಾರಣಾ ವರದಿ, ದಾಖಲೆಗಳು, ಸಾಕ್ಷಿಗಳ ಹೇಳಿಕೆ ಹಾಗೂ ಆಪಾದಿತರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಿರುತ್ತದೆ. ಚಿತ್ರದುರ್ಗ ಜಿಲ್ಲೆ, ವದ್ದಿಗೆರೆ ಗ್ರಾಮದ ಸರ್ವೆ ನಂಬರ್ 53ರ ಜಮೀನಿನಲ್ಲಿ ನಿರ್ವಹಿಸಿದ ಚೆಕ್ ಬಂಡ್ ಕಾಮಗಾರಿಯ ವಾಸ್ತವಿಕ ಅಳತೆಗಿಂತ 592.71 ಸೆ.ಮಿ ಹೆಚ್ಚಿನ ಅಳತೆಯನ್ನು ಅಳತೆ ಪುಸ್ತದಲ್ಲಿ ಆಪಾದಿತರು ದಾಖಲಿಸಿ ರೂ.33,192/-ಗಳನ್ನು ಹೆಚ್ಚಿಗೆ ಪಾವತಿಸಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುತ್ತಾರೆ. ಆದರೆ ಸದರಿ ಆರೋಪಕ್ಕೆ ಸಂಬಂಧಿಸಿದಂತೆ, ಮೇಲ್ಕಂಡ ಇಬ್ಬರು ಆಪಾದಿತರು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ಕಾಮಗಾರಿಯನ್ನು ನಿರ್ವಹಿಸಿದ ಸಂದರ್ಭದಲ್ಲಿ ಇದ್ದ ಅಳತೆಗನುಗುಣವಾಗಿ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿ ಹಣ ಪಾವತಿಸಲಾಗಿದೆಯೆಂದು, ಈ ಕಾಮಗಾರಿಯನ್ನು ನಿರ್ವಹಿಸಿದ ನಂತರ 2 ಬಾರಿ ಅಳತೆ ಮಾಡಲಾಗಿದೆಯೆಂದು ಚೆಕ್ ಬಂಡ್‌ನಲ್ಲಿ ಉಂಟಾಗಿರುವ ಶ್ರೀಂಕೇಜ್‌ನ್ನು ತನಿಖಾಧಿಕಾರಿಯವರು ಪರಿಗಣಿಸಿರುವುದಿಲ್ಲವೆಂದು, ಹಾಗಾಗಿ ತಮ್ಮನ್ನು ಈ ಪ್ರಕರಣದಿಂದ ಕೈಬಿಡುವಂತೆ ಕೋರಿರುತ್ತಾರೆ. ಆದರೆ ಆಪಾದಿತರು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿನ ಈ ಅಂಶಗಳನ್ನು ವಿಚಾರಣಾಧಿಕಾರಿಯವರು ವಿಚಾರಣೆಯ ಸಂದರ್ಭದಲ್ಲಿ ಈಗಾಗಲೇ ಪರಿಗಣಿಸಿ ವಿವರವಾಗಿ

..4/-

ಚರ್ಚಿಸಿ ಆರೋಪಗಳು ಸಾಬೀತಾಗಿವೆ ಎಂದು ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ಹಾಗಾಗಿ ಸದರಿ ಆಪಾದಿತರು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿನ ಅಂಶಗಳು ಪರಿಗಣನೆಗೆ ಅರ್ಹವಾಗಿರುವುದಿಲ್ಲ. ಆದ್ದರಿಂದ ವಿಚಾರಣಾ ವರದಿಯನ್ನು ಒಪ್ಪಿ, ಸಾಭೀತಾದ ಆರೋಪಗಳಿಗನುಗುಣವಾಗಿ ಆಪಾದಿತರುಗಳಿಗೆ ದಂಡನೆ ವಿಧಿಸಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 96 ಇಎನ್‌ಕ್ಯೂ 2021**
**ಬೆಂಗಳೂರು, ದಿನಾಂಕ: 10.03.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡ ಆಪಾದಿತ ಅಧಿಕಾರಿ/ನೌಕರರ ವಿರುದ್ಧ ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ಅವರ ಹೆಸರಿನ ಮುಂದೆ ಸೂಚಿಸಿರುವಂತೆ ದಂಡನೆ ವಿಧಿಸಿ ಆದೇಶಿಸಿದೆ:-

| ಕ್ರ.ಸಂ | ಆಪಾದಿತರ ಹೆಸರು | ದಂಡನೆ ಸ್ವರೂಪ |
|---|---|---|
| 1. | ಶ್ರೀ ತೋಕ್ಯಾನಾಯ್ಕ,<br>ಹಿಂದಿನ ಕಿರಿಯ ಇಂಜಿನಿಯರ್,<br>ಪಂ.ರಾ.ಇಂ. ಉಪ ವಿಭಾಗ<br>ಹಿರಿಯೂರು. | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii) ರ ಅನುಸಾರ ಸದರಿಯವರ ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ವಾರ್ಷಿಕ ಬಡ್ತಿಯನ್ನು ಸಂಚಿತ ಪರಿಣಾಮ ಹೊಂದುವಂತೆ ತಡೆಹಿಡಿಯುವುದು. |
| 2. | ಶ್ರೀ ಸತ್ಯಪ್ಪ,<br>ಹಿಂದಿನ ಸಹಾಯಕ<br>ಕಾಯಪಾಲಕ ಇಂಜಿನಿಯರ್,<br>ಪಂ.ರಾ.ಇಂ.ಉಪ ವಿಭಾಗ,<br>ಹಿರಿಯೂರು. | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii) ರ ಅನುಸಾರ ಸದರಿಯವರ ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ವಾರ್ಷಿಕ ಬಡ್ತಿಯನ್ನು ಸಂಚಿತ ಪರಿಣಾಮ ಹೊಂದುವಂತೆ ತಡೆಹಿಡಿಯುವುದು. |

ಮೇಲ್ಕಂಡ ಆಪಾದಿತ ಅಧಿಕಾರಿಗಳಿಗೆ ವಿಧಿಸಲಾದ ದಂಡನೆಯನ್ನು ಜಾರಿಗೊಳಿಸಲು ಕ್ರಮ ತೆಗೆದುಕೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಇವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

10/3

**(ಕೆ.ನದೀಮ್ ಅಹ್ಮದ್),**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

10/3

**ಇವರಿಗೆ:**

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಅಪರ ನಿಬಂಧಕರು ವಿಚಾರಣೆಗಳು-14, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ (ನೋಂದಾಯಿತ ಅಂಚೆ ಮುಖಾಂತರ).

5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದಕ್ಷಿಣ), ಬೆಂಗಳೂರು.
7. ಸಂಬಂಧಪಟ್ಟ ಅಧಿಕಾರಿ / ನೌಕರರಿಗೆ ಮುಖ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಇವರ ಮುಖಾಂತರ.

**<u>ಪ್ರತಿಯನ್ನು:</u>**

1. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
2. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಜಂಟಿ ಕಾರ್ಯದರ್ಶಿ (ಆಡಳಿತ-1) ಇವರ ಆಪ್ತ ಕಾರ್ಯದರ್ಶಿ /ಆಪ್ತ ಸಹಾಯಕರು.
3. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು ಬಿ & ಸಿ).
4. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಕಂಪ್ಯೂಟರ್ ಸೆಲ್.